ಇ) ವರದಿಯ ಮುಖ್ಯಾಂಶಗಳೆಂದರೆ :

1. ಕರ್ನಾಟಕದಲ್ಲಿ ಆರೋಗ್ಯ ವಿಶ್ವವಿದ್ಯಾನಿಲಯ ಸ್ಥಾಪಿಸಲು ಶಿಫಾರಸ್ಸು ಮಾಡಿರುವುದು ಪ್ರಥಮವಾಗಿ ಆರೋಗ್ಯ ವಿಜ್ಞಾನಗಳ ಎಲ್ಲಾ ಸಂಶೋಧನಾ ಮತ್ತು ಬೋಧನಾ ವಿಭಾಗಗಳ ಮಟ್ಟವನ್ನು ಹೆಚ್ಚಿಸುವುದು (ದೇಶಿಯ ವೈದ್ಯಪದ್ಧತಿ ಮತ್ತು ಆಧುನಿಕ ವೈದ್ಯ ಪದ್ಧತಿ ಸೇರಿದಂತೆ) ಸದರಿ ವಿಶ್ವವಿದ್ಯಾನಿಲಯ 1992-93ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಯಾಚರಣೆಗೊಳ್ಳುವಂತೆ ಸರ್ವ ಪ್ರಯತ್ನಗಳನ್ನು ಮಾಡುವುದು.
2. ಹೊಸ ವಿಶ್ವವಿದ್ಯಾನಿಲಯವನ್ನು ಪ್ರಾರಂಭದಲ್ಲಿ ಸಂಯೋಜಿತ ವಿಶ್ವವಿದ್ಯಾನಿಲಯ ವೆಂದು ಪ್ರಾರಂಭಿಸುವುದು. ಹಂತ ಹಂತವಾಗಿ ಸ್ವಂತ ಕ್ಯಾಂಪಸ್‌ನ್ನು ವಿಶೇಷ ರಂಗ: ವಿಭಾಗಗಳಲ್ಲಿ ಮುಂದುವರೆದ ತರಬೇತಿ ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಸ್ವಂತ ಕ್ಯಾಂಪಸ್‌ನ್ನು ಹೊಂದುವುದು. ಪ್ರಸ್ತುತ ಅಸ್ತಿತ್ವದಲ್ಲಿರುವ ಒಂದು ವೈದ್ಯಕೀಯ ಕಾಲೇಜನ್ನು ಸ್ವಾಧೀನಕ್ಕೆ ತೆಗೆದುಕೊಂಡು ಮಾದರಿಯಾಗಿ ಇತರರಿಗೆ, ರೂಪಿಸಲು ಅಭಿವೃದ್ಧಿಪಡಿಸುವುದು.
3. ಹೊಸ ವಿಶ್ವವಿದ್ಯಾನಿಲಯವು ಆಧುನಿಕ ವೈದ್ಯಶಾಸ್ತ್ರದ ಕಾಲೇಜಗಳಿಗೆ ಮತ್ತು ಇತರ ಸಂಸ್ಥೆಗಳಿಗೆ ಪ್ರವೇಶ ಮಟ್ಟವನ್ನು ನಿಗಧಿಗೊಳಿಸಲು ಪೂರ್ಣ ಅಧಿಕಾರವನ್ನು ಹೊಂದಿರತಕ್ಕದ್ದು.
4. ಪ್ರಸ್ತುತ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಪ್ರಸ್ತುತ ಸ್ಥಿತಿಯಲ್ಲೇ ಕಾರ್ಯ ನಿರ್ವಹಿಸುವುದು. ಹೊಸ ವಿಶ್ವವಿದ್ಯಾನಿಲಯ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಲ್ಲಿ ನಿಯಮಗಳಿಗೆ ಸಂಬಂಧಿಸಿದಂತೆ ಅಂತರ: ವ್ಯತ್ಯಾಸವಿರುವುದಿಲ್ಲ. ನಿರ್ದೇಶನಾಲಯವು ಹೊಸ ವಿಶ್ವವಿದ್ಯಾನಿಲಯ ರೂಪಿಸುವ ನಿಯಮಗಳನ್ನು ಕಾರ್ಯ ಗತಗೊಳಿಸಲು ಅತ್ಯಂತ ಪ್ರಮುಖ ಪಾತ್ರ ವಹಿಸುವುದು. ಈ ಸಂಬಂಧ, ನಿರ್ದೇಶನಾಲಯದ ನಿಯಂತ್ರಣದಲ್ಲಿ ವೈದ್ಯಕೀಯ ಸಂಸ್ಥೆಗಳಿಗೆ ನಿಧಿಪಡಿಸಿರುವ ರೂಪುರೇಷೆಗಳನ್ನು ಕಾರ್ಯಗತ ಗೊಳಿಸುವುಲ್ಲಿ ಪ್ರಮುಖ ಪಾತ್ರ ವಹಿಸುವುದು.
5. ಹೊಸ ವಿಶ್ವವಿದ್ಯಾನಿಲಯ ಹಲವಾರು ಬೋಧಕ ಆಸ್ಪತ್ರೆಗಳ ಆಡಳಿತ, ನಿರ್ವಹಣೆ ಜವಾಬ್ದಾರಿ ಹೊರೆಯಾಗಬಾರದು.
6. ಆರೋಗ್ಯ ಸೇವೆಗಳ ವಿಶ್ವವಿದ್ಯಾನಿಲಯದ ಮಸೂದೆ 1973 (ವಿಧಾನಸಭೆ ಮಸೂದೆ ಸಂಖ್ಯೆ : 48, 1973) ನ್ನು ವಿಧಾನಮಂಡಲದ ಉಭಯ ಸದನಗಳಲ್ಲೂ ಅನು ಮೋದನೆ ಪಡೆಯುವುದು. (ಕೆಲವು-ಸಲಹೆಗಳನ್ನು ಪರಿಷ್ಕರಿಸುವಂತೆ)
7. ಹೊಸ ವಿಶ್ವವಿದ್ಯಾನಿಲಯಕ್ಕೆ ಬೇಕಾದ ಮೂಲ ಸೌಕರ್ಯಗಳನ್ನು ರಾಜ್ಯ ಸರ್ಕಾರದ ಜೊತೆ ಸಮಾಲೋಚಿಸಿ ಸಂಘಟನೆ ಕಾರ್ಯಕ್ಕೆ ಕೂಡಲೇ ಒಬ್ಬ ಆಡಳಿತ ವೃತ್ತಿನುಭವಿ ಹಾಗೂ ಸಹಜ ಸಾಮರ್ಥ್ಯವುಳ್ಳ ವಿಶೇಷಾಧಿಕಾರಿಯನ್ನು ನೇಮಿಸುವುದು.

) ಪರಿಶೀಲನೆಯಲ್ಲಿದೆ

ಬೀದರ್ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ಜಾತಿಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ.

1070. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಜಿರಾದ್) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೀದರ್ ಜಿಲ್ಲೆಯಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಹಾಗೂ ಹಿಂದುಳಿದ ಜಾತಿಗಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು (ತಾಲ್ಲೂಕುವಾರು ಅಂಕಿಅಂಶಗಳನ್ನು ನೀಡುವುದು) ;

ಆ) ಈ ವಿದ್ಯಾರ್ಥಿನಿಲಯಗಳಿಗೆ ಕಳೆದ ಮೂರು ವರ್ಷಗಳಿಂದ ಸರ್ಕಾರದಿಂದ ಬಿಡುಗಡೆ ಮಾಡಿರುವ ಹಣವೆಷ್ಟು (ತಾಲ್ಲೂಕುವಾರು ಅಂಕಿ ಅಂಶಗಳನ್ನು ಕೊಡುವುದು) ;

ಇ) ಜಿಲ್ಲೆಯಲ್ಲಿ ಈ ಮೇಲ್ಕಂಡ ವರ್ಷಗಳಲ್ಲಿ ವಿದ್ಯಾರ್ಥಿಗಳಿಗಾಗಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆಯೇ;

ಈ) ಇದ್ದಲ್ಲಿ, ಜಿಲ್ಲೆಯ ಯಾವ ಯಾವ ಭಾಗಗಳಲ್ಲಿ ಈ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) :–

ಅ)

	ಸಮಾಜ ಕಲ್ಯಾಣ			ಬಿ.ಸಿ.ಎಂ.		
	ಮೆ. ಪೂ.	ಮೆ. ನಂ.	ಅನುದಾನಿತ	ಮೆ. ಪೂ.	ಮೆ. ನಂ.	ಅನುದಾನಿತ
	27	–	4	26	2	2

ತಾಲ್ಲೂಕುವಾರು ವಿವರ

	ಸಮಾಜ ಕಲ್ಯಾಣ			ಬಿ.ಸಿ.ಎಂ.		
	ಮೆ. ಪೂ.	ಮೆ. ನಂ.	ಅನುದಾನಿತ	ಮೆ. ಪೂ.	ಮೆ. ನಂ.	ಅನುದಾನಿತ
1) ಹುಮ್ನಾಬಾದ್	8	–	2	5	–	1
2) ಔರಾದ್	3	–	1	8	–	1
3) ಬಾಲ್ಕಿ	8	–	–	2	–	–
4) ಬಸವಕಲ್ಯಾಣ	5	–	1	6	–	–
5) ಬೀದರ್	3	–	–	5	2	–

ಆ) ಕಳೆದ ಮೂರು ವರ್ಷಗಳಿಂದ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿದೆ.

ಸಮಾಜ ಕಲ್ಯಾಣ ಇಲಾಖೆ	ಹಿಂದುಳಿದ ವರ್ಗಗಳ ಇಲಾಖೆ
ರೂ. 1,32,87,433	ರೂ. 108.51 ಲಕ್ಷ

ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ದಿನಾಂಕ 1.–2–92 ರಂದು ಬೀದರ್ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕು ರಾಜೇಶ್ವರಿಯಲ್ಲಿ ಹಾಗೂ ಬೀದರ್ ತಾಲ್ಲೂಕು ಮರೆಗಾವ್ ಗ್ರಾಮದಲ್ಲಿ ಹೊಸ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ ನೀಡಿದೆ. ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯಿಂದ 1991–92 ರಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್‌ನಲ್ಲಿ ವಿದ್ಯಾರ್ಥಿನಿಲಯ ಮಂಜೂರು ಮಾಡಿದೆ.

ಈ) ಉದ್ಭವಿಸುವುದಿಲ್ಲ

ANNEXURE

DETAILS OF TALUK–WISE AMOUNT RELEASED TO B.C.M. HOSTELS OF BIDAR DISTRICT FOR THE YEAR 1988 –89 TO 1990–91. (Rs. in lakhs)

Sl. No.	Taluk	1988–89	1989–90	1990–91	Total
1.	Bidar	11.49	11.47	12.47	35.43
2.	Aurad	06.40	06.40	0.789	20.69
3.	Basavakalyana	07.20	07.30	08.20	22.70
4.	Bhalki	02.40	02.40	03.40	08.20
5.	Humnabad	07.00	07.21	07.28	21.49
	Total	34.49	34.78	39.24	108.51

ಅನುಬಂಧ - ಅ

ಸಮಾಜ ಕಲ್ಯಾಣ ಇಲಾಖೆಯಿಂದ ಬೀದರ್ ಜಿಲ್ಲೆಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿನಿಲಯಗಳಿಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣದ ವಿವರ ಈ ಕೆಳಕಂಡಂತಿದೆ.

1988–89 ರಿಂದ 1990–91

ಕ್ರಮ ಸಂಖ್ಯೆ	ತಾಲ್ಲೂಕು	1988–89 (ರೂ.)	1989–90 (ರೂ.)	1990–91 (ರೂ.)	ಒಟ್ಟು (ರೂ.)
1	2	3	4	5	6
1.	ಹುಮ್ನಾಬಾದ್	1,00,781	4,20,800	13,35,620	18,57,201
2.	ಔರಾದ್	4,28,600	4,80,000	5,72,000	14,80,600
3.	ಬಾಲ್ಕಿ	10,26,497	11,49,600	13,69,940	35,46,037
4.	ಬಸವಕಲ್ಯಾಣ	6,75,045	7,56,000	9,00,900	23,31,945
5.	ಬೀದರ್	11,78,650	13,20,000	15,73,000	40,71,650
		ಒಟ್ಟು			1,32,87,433

ಸರ್ಕಾರಿ ಸ್ವಾಮ್ಯದ ಮೈಸೂರು ಸಾಬೂನು ಕಾರ್ಖಾನೆಯು ಅನುಭವಿಸುತ್ತಿರುವ ನಷ್ಟ

1071. ಶ್ರೀ ಗುರುಪಾದಪ್ಪ ನಾಗ್ಮಾರಪಲ್ಲಿ (ಔರಾದ್) :– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ –

ಅ) ರಾಜ್ಯ ಸರ್ಕಾರಿ ಸ್ವಾಮ್ಯದ ಮೈಸೂರು ಸಾಬೂನು ಮತ್ತು ಮಾರ್ಜಕಗಳ ಕಾರ್ಖಾನೆ ನಷ್ಟದಲ್ಲಿ ನಡೆಯುತ್ತಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, 31ನೇ ಜನವರಿ 1992ರವರೆಗೆ ಈ ಕಾರ್ಖಾನೆಯು ಯಾವ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಿದೆ;

ಇ) ಕಾರ್ಖಾನೆಗಳ ವಿಸ್ತರಣಾ ಯೋಜನೆಗಳ ಅನುಷ್ಠಾನದಲ್ಲಿ ಆಗಿರುವ ಅವ್ಯವಹಾರವೇ ಈ ನಷ್ಟಕ್ಕೆ ಕಾರಣವೆಂಬುದನ್ನು ಸರ್ಕಾರ ಗಮನಿಸಿದೆಯೇ;

ಈ) ಈ ನಷ್ಟಕ್ಕೆ ಕಾರಣರಾದ ಈಗಿನ ಹಾಗೂ ಹಿಂದಿನ ಉನ್ನತ ಅಧಿಕಾರಿಗಳ ಮೇಲೆ ಸರ್ಕಾರ ಅಗತ್ಯ ಕ್ರಮವನ್ನು ಜರುಗಿಸುತ್ತದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ಹೌದು.

ಆ) ಕಂಪನಿಯು ದಿನಾಂಕ 31.1.1992 ರವೆಗೆ ರೂ. 8140.33 ಲಕ್ಷಗಳು.

ಇ) ಈ ಕಾರ್ಖಾನೆಯು ವಿಸ್ತರಣಾ ಯೋಜನೆಗೆ ಸಂಬಂಧದಲ್ಲಿ ಆಗಿರುವ ನಷ್ಟದ ಬಗ್ಗೆ ಕಾರಣ ತಿಳಿಯಲು ಮಹೇಂದ್ರ ಎನ್ಕ್ವೈರಿ ಕಮೀಷನನ್ನು ಸರ್ಕಾರ ನೇಮಿಸಿದೆ. (ಸರ್ಕಾರದ ಆದೇಶ ಸಂಖ್ಯೆ ಸಿಐ 54 ಸಿಹೆಚ್ಐ 38 ರಲ್ಲಿ) ತನಿಖೆ ಪೂರ್ಣವಾದ ನಂತರ ನಷ್ಟಕ್ಕೆ ನಿಜವಾದ ಕಾರಣ ತಿಳಿದು ಬರುತ್ತದೆ 9–9–91

ಈ) ಹೌದು, ಜಸ್ಟಿಸ್ ಮಹೇಂದ್ರ ಕಮೀಷನ್ ವರದಿಯನ್ನು ಅನುಸರಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.